ಶ್ರೀ ಎಸ್. ಗೋಪಾಲಗೌಡ —(ಅ) ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ 41 ಲಕ್ಷ 90 ಸಾವಿರದ 987 ರೂಪಾಯಿಗಳು ನಾನ್‌ರೀಡೀಮಬಲ್ ಷೇರ್ ಅಂತ ಇದುವರೆಗೂ ಕರೆಕ್ಟ್ ಮಾಡಿರುವುದು ಒಂದು. ಇನ್ನೊಂದು ದಲಿತ ವರ್ಗದ ರೈತರಿಗೆ ಒಪ್ಪಿಗೆ ಕೊಡವೇ ನಿರಾಕರಿಸಿರುವುದಕ್ಕೆ ಕಾರಣ ವೇನು ಎಂದು ಕೇಳಿದ್ದಕ್ಕೆ ನಿರಾಕರಿಸಿಲ್ಲ ಎಂದು ಹೇಳಿರುವುದು ಸತ್ಯಕ್ಕೆ ದೂರವಾದ ಉತ್ತರ. ಎರಡನೆಯದು ಅಧ್ಯಕ್ಷರ ಬಗ್ಗೆ ದೂರು ಬಂದು ಈ ಬಗ್ಗೆ ಕ್ರಮ ಏನು ಕೈಕೊಳ್ಳಲಾಗಿದೆ ಅಂತ ಅನ್ನುವುದಕ್ಕೆ, ತನಿಖೆ ಮಾಡರಾಗುತ್ತಿದೆ ಎಂದು ಹೇಳಿದ್ದೀರಿ. ಈಗ 15 ಲಕ್ಷದ 78 ಸಾವಿರ ಚಿಲ್ಲರೆ ರೂಪಾಯಿ ಮಾತ್ರ ಎನ್.ಆರ್.ಡಿ. ಇದೆ. ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡುವ ಅಗತ್ಯ ಇದೆ ಎಂದು ಹೇಳಿದ್ದೀರಿ. ಇದುವರೆಗೂ 5985 ಜನರನ್ನು ಮಾತ್ರ ಷೇರ್ ಹೋಲ್ಡರುಗಳನ್ನಾಗಿ ತೆಗೆದುಕೊಂಡು ಈ ಸಹಕಾರಿ ಸಕ್ಕರೆ ಕಂಪೆನಿಯಲ್ಲಿ ತಮಗೆ ಇಷ್ಟ ಬಂದ ರೀತಿಯಲ್ಲಿ ಹಣಗಳನ್ನು ಕೊಡುವುದು, ಅವರನ್ನು ಷೇರುದಾರರನ್ನಾಗಿ ನೇಮಿಸಿಕೊಳ್ಳುವುದು, 40 ರೂಪಾಯಿನಂತೆ ಹೊರಗಡೆಯಿಂದ ಕಬ್ಬನ್ನು ಕೊಂಡು 60 ರೂಪಾಯಿ ದರ ಹಾಕಿ ಪುನ್ಕಕವಲ್ಲ ತೋರಿಸುವುದು ಇದೆಲ್ಲಾ ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಈ ಪಾಂಡವಪುರ ಸಕ್ಕರೆ ಕಂಪೆನಿ ಹೇಗೆ ನಡೆಯುತ್ತಾ ಇದೆ ಅಂತ ಅನ್ನುವುದು ಸರ್ಕಾರದವರಿಗೆ ಗೊತ್ತಿದೆಯೇ?

ಶ್ರೀ ಬಿ. ಎಲ್. ಗೌಡ.—ಮಾನ್ಯ ಸ್ನೇಹಿತರು ಬಹಳ ದೊಡ್ಡ ಪ್ರಶ್ನೆ ಹಾಕಿದರು. ನನಗೆ ತಿಳಿದು ಬಂದಷ್ಟು ಹೇಳುತ್ತೇನೆ. 5985 ಜನಗಳನ್ನು ಮಾತ್ರ ಮೆಂಬರುಗಳನ್ನಾಗಿ ತೆಗೆದುಕೊಂಡಿದ್ದಾರೆ. ನಾನ್‌ರೀಫಂಡಬರ್ ಡಿಪಾಸಿಟ್ ಎಂದರೆ ಯಾವ ಯಾವ ರೈತರು ಕಾರ್ಖಾನೆಗೆ ಕಬ್ಬನ್ನು ಸರಬರಾಯಿ ಮಾಡುತ್ತಾರೆಯೋ ಅವರಿಗೆ, ಪ್ರತಿಯೊಂದು ಟನ್‌ಗೆ ಒಂದು ರೂಪಾಯಿ ಕಡಿದು ಕೊಳ್ಳುತ್ತಾರೆ. ಹೀಗೆ 41 ಲಕ್ಷ ರೂಪಾಯಿ ಹಿಡಿದುಕೊಂಡಿದ್ದಾರೆ. ಅದರಲ್ಲಿ 25 ಲಕ್ಷ ರೂಪಾಯಿಗಳನ್ನು ಈಗಾಗಲೇ ಷೇರಾಗಿ ಪರಿವರ್ತನೆ ಮಾಡಿದ್ದೇವೆ. 15,78,740 ರೂಪಾಯಿಗಳು ಮಾತ್ರ ಪರಿವರ್ತನೆಯಾಗಿಲ್ಲ. ಅಲ್ಲಿ ಕೆಲವು ಲೋಪದೋಷಗಳಿವೆ ಎಂದು ಹೇಳುತ್ತಾರೆ. ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ ಚೆನ್ನಾಗಿ ಕೆಲಸಮಾಡುತ್ತಿದೆ, ಅಲ್ಲಿ ಲೋಪದೋಷಗಳೇನೂ ಇಲ್ಲ.

ಶ್ರೀ ಹೆಚ್. ಬಿ. ಜ್ಞಾಲನಯ್ಯ.—ಅಧ್ಯಕ್ಷರ ಬಗ್ಗೆ ದೂರು ಬಂದಿದೆ ಎಂದು ಹೇಳಿದ್ದಾರೆ ಏನು ದೂರು ಬಂದಿದೆ, ಯಾರು ತನಿಖೆ ಮಾಡುತ್ತಿದ್ದಾರೆ, ಎಷ್ಟು ದಿವಸದಲ್ಲಿ ರಿಪೋರ್ಟ್ ಬರುತ್ತದೆ ಮತ್ತು ಆ ರಿಪೋರ್ಟನ್ನು ಸಭೆಯ ಮುಂದೆ ಇಡುತ್ತಾರೆಯೇ?

ಶ್ರೀ ಬಿ. ಎಲ್. ಗೌಡ.—ಅಧ್ಯಕ್ಷರು ಹೆಚ್ಚು ಪ್ರಯಾಣ ಭತ್ಯವನ್ನು ತೆಗೆದುಕೊಂಡಿದ್ದಾರೆ ಏನ್ನುವುದು ಒಂದು ಮತ್ತು ಪ್ರತಿಯೊಂದು ಟನ್ ಕಬ್ಬಿಗೂ ಒಂದು ರೂಪಾಯಿ ಖಾಸಗಿಯಾಗಿ ಅವರು ತೆಗೆದುಕೊಂಡಿದ್ದಾರೆ ಎನ್ನುವ ಎರಡು ದೂರುಗಳು ಬಂದಿವೆ. ಇಲಾಖಾಧಿಕಾರಿಗಳು ವಿಚಾರಣೆ ನಡೆಸುತ್ತಿದ್ದಾರೆ. ಅತಿ ಶೀಘ್ರದಲ್ಲಿಯೇ ವಿಚಾರಣೆ ಮುಗಿಯುತ್ತದೆ.

ಶ್ರೀ ಬಿ. ದೊಡ್ಡಬೋರೇಗೌಡ.—ದಲಿತ ವರ್ಗದವರಿಗೆ ಒಪ್ಪಿಗೆ ಕೊಡುವುದಕ್ಕೆ ನಿರಾಕರಿಸಿಲ್ಲ ಎಂದು ಹೇಳಿದ್ದಾರೆ. ಕಬ್ಬನ್ನು ಬೆಳೆಯದೆ ಇರುವ ರೈತರಿಂದ, ಒಂದೊಂದು ಗ್ರಾಮದಲ್ಲಿ ಮೂರು ನಾಲ್ಕು ಜನಗಳಿಗೆ ಒಂದು ಸಾವಿರ, ಒಂದೂವರೆ ಸಾವಿರ ಟನ್ ಕಬ್ಬನ್ನು ಟನ್ ಒಂದಕ್ಕೆ 40 ರೂಪಾಯಿಗಳಂತೆ ತೆಗೆದುಕೊಂಡು 140 ರೂಪಾಯಿ ಪ್ರಕಾರ ತೆಗೆದುಕೊಂಡಿರುವವರಿಗೆ ಕೊಟ್ಟು ಅವರಿಗೆ ಬೇಕಾದವರಿಗೆ ಒಪ್ಪಿಗೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹೀಗೆ ರುಜುವಾತು ಮಾಡಿಕೊಟ್ಟರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಬಿ. ಎಲ್. ಗೌಡ.—ರುಜುವಾತು ಮಾಡಿಕೊಟ್ಟರೆ ಸಂಬಂಧಪಟ್ಟವರ ಮೇಲೆ ತೀವ್ರ ಕ್ರಮ ತೆಗೆದುಕೊಳ್ಳುತ್ತೇವೆ.

FALL IN PRICE OF JAGGERY

96. Sri N. A. CHANNE GOWDA (Pandavapura).—

Will the Minister of State for Food and Civil Supplies be pleased to state :—

(*a*) whether it has come to the notice of the Government that the prices of jaggery has fallen very steeply ;

(*b*) the approximate production of jaggery in the State;

(*c*) the steps the Government has taken to give price support to the farmers who manufacture jaggery;

(*d*) whether there is any proposal to move the Central Government to take steps to explore export markets for State jaggery?

Sri B. VITHALDAS SHETTY (Minister of State for Food and Civil Supplies.—

(*a*) Yes.

(*b*) 7,58,600 tonnes per annum.

(*c*) The price support for sugarcane and other food and commercial crops is a matter of All-India Policy and if concrete suggestions are made, the State Government will take up the matter with the Government of India.

To provide immediate relief to jaggery producers and to enable them to get better price, all restructions on the movement of jaggery which were imposed earlier have been realxed till the end of January, 1970. Government is keeping a close watch over the fluctuations in price so that neither the producer nor the consumer is hard-hit.

(*d*) No.

ಶ್ರೀ ಎನ್. ಎ. ಚನ್ನೇ ಗೌಡ.—ಕಬ್ಬು ಬಹಳ ಪ್ರಾಮುಖ್ಯವಾದ ಬೆಳೆ. ಅದನ್ನು ಬೆಳೆಯುವುದಕ್ಕೆ ಬೇಕಾದ ಉಪ್ಪು, ಹಿಂಡಿ ಮುಂತಾದವುಗಳ ಬೆಲೆ ಏಪರೀತವಾಗಿ ಏರಿದ್ದರೂ ಕೂಡ, ರಾಗಿ, ಬತ್ತ ಇವುಗಳಿಗೆ ಪ್ರೈಸ್ ಸಪೋರ್ಟ್ ಕೊಟ್ಟ ಹಾಗೆ ಬೆಲ್ಲಕ್ಕೆ ಏಕೆ ಪ್ರೈಸ್ ಸಪೋರ್ಟ್ ಕೊಡುವುದಿಲ್ಲ?

† ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಇದಕ್ಕೆ ಪ್ರೈಸ್ ಸಪೋರ್ಟ್ ಕೊಡುವಂಥದ್ದು ಕೇಂದ್ರ ಸರ್ಕಾರಕ್ಕೆ ಸೇರಿದ್ದು. ಆ ಬಗ್ಗೆ ನಾವು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಎನ್. ಎ. ಚನ್ನೇ ಗೌಡ.—ಹಾಲು ಇರತಕ್ಕ ಬೆಲೆಯನ್ನಾದರೂ ಹೇಳುತ್ತೀರಾ? ಕಬ್ಬನ್ನು ಅರೆದು ಬೆಲ್ಲ ಮಾಡಿದರೆ ಏನು ಖರ್ಚಾಗಿದೆಯೋ ಅದೂ ಕೂಡ ಬರುವುದಿಲ್ಲ ಎಂದು ಬೇಕಾದಷ್ಟು ಎಕರೆ ಜಮೀನಿನಲ್ಲಿರುವ ಫಸಲಿಗೆ ಬೆಂಕಿ ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಬೆಂಕಿ ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

Sri THIRUMALADEVARAYA.—It is replied that Government is keeping a close watch over the fluctuations in price so that neither the producer nor the consumer is hard-hit. I want to know whether the Government is aware that producers are already hard hit by the fall in jaggery price? If so, in what way has the Government kept a close watch over the prices of jaggery?

Sri B. VITHALDAS SHETTY.—The Government of India has been addressed to repeal the principal order which is in force relating to jaggery and that means that Government want to give relief to jaggery producers.

Sri N. A CHANNE GOWDA.—Have the State Government enlightened the Central Government of the troubles experienced by the growers of sugarcane?

Sri B. VITHALDAS SHETTY.—We have already addressed the Governement of India on 28th Novermber 1969.

ಶ್ರೀ ಕೆ. ಎಚ್. ರಂಗನಾಥ್. – ಬೆಲ್ಲದ ಮೂವ್‌ಮೆಂಟ್ ಬಗ್ಗೆ ಯಾವಾಗ ನಿರ್ಬಂಧವನ್ನು ಹಾಕಲಾಯಿತು ಮತ್ತು ಅದನ್ನು ಯಾವಾಗ ತೆಗೆದುಹಾಕಲಾಯಿತು ?

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಬೆಲೆ ಬಹಳ ಹೆಚ್ಚಾದಾಗ ನಿರ್ಬಂಧವನ್ನು ಹಾಕಿದೆವು. 23-11-1967 ರಲ್ಲಿ ಪಾರ್ಷಿಯಲ್ ಡೀ ಕಂಟ್ರೋಲ್ ಆಫ್ ಷುಗರ್ ಜಾರಿಗೆ ತಂದಾಗ ಬೆಂಗಳೂರಿನಲ್ಲಿ 180 ರೂಪಾಯಿ, ಬೆದರೆಯಲ್ಲಿ 199 ರೂಪಾಯಿ, ಬೆಳಗಾಂನಲ್ಲಿ 208 ರೂಪಾಯಿ, ಬಳ್ಳಾರಿಯಲ್ಲಿ 165 ರೂಪಾಯಿ, ಮಂಡ್ಯದಲ್ಲಿ 170ರಿಂದ 190 ರೂಪಾಯಿವರೆಗೆ ಇತ್ತು. ಆವಾಗ ಒಂದು ನಿರ್ಬಂಧವನ್ನು ಹಾಕಿದೆವು. ನಂತರ ಬೆಲೆ ಕಡಿಮೆಯಾಯಿತು.

ಶ್ರೀ ಎಸ್. ಪಿ. ಅಗ್ನಿಹೋತ್ರಿ.—ಬೆಲ್ಲದ ಬೆಲೆ ಈಗ ಏರಿದೆ ಎನ್ನುವುದು ಗೊತ್ತಿದೆಯೇ ?

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಈಗ ಬೆಂಗಳೂರಿನಲ್ಲಿ ಬೆಲ್ಲದ ಬೆಲೆ 55 ರಿಂದ 85 ರೂಪಾಯಿಗಳವರೆಗೆ ಇದೆ.

ಶ್ರೀ ವಿ. ಎನ್. ಪಾಟೀಲ್.—1967ನೇ ನವಂಬರ್‌ನಿಂದ 1969ನೇ ಮಾರ್ಚ್ ತಿಂಗಳವರೆಗೆ ಬೆಲ್ಲದ ಬೆಲೆ ಒಂದು ಕ್ವಿಂಟಾಲಿಗೆ 325 ರೂಪಾಯಿನಿಂದ 275 ರೂಪಾಯಿ ತನಕ ಇತ್ತು. ಈಗ 30 ರಿಂದ 35 ರೂಪಾಯಿವರೆಗೆ ಇದೆ. ಪ್ರೈಸ್ ಸಪೋರ್ಟ್ ಪಾಲಿಸಿ ಇಲ್ಲದೆ ಇರುವುದರಿಂದ ಕೇವಲ ಒಬ್ಬಿಬ್ಬರ ಮನಾಪಲಯಾಗಿ ಸಕ್ಯುರ್‌ಲೇಷನ್ ಮಾಡುತ್ತಿದ್ದಾರೆ ಮತ್ತು ಮಾರುಕಟ್ಟೆಯನ್ನು ರೂಲ್ ಮಾಡುವುದಕ್ಕೆ ಅವಕಾಶವಾಗಿದೆ. ರೈತರು ಮತ್ತು ಕಾರ್ಮಿಕರಿಗೆ ಏನೂ ಇದರಿಂದ ಅನುಕೂಲವಾಗುತ್ತಿಲ್ಲ. ಇದರ ಬಗ್ಗೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಪ್ರಕೃತ ಬೆಲ್ಲದ ಬೆಲೆ ಏರುತ್ತಿದೆ.

ಶ್ರೀ ಎನ್. ಎ. ಚನ್ನೇ ಗೌಡ.—ಬೆಲೆಗಳು ಏರಿದಾಗ ಕಂಟ್ರೋಲ್ ಹಾಕಲಾಯಿತು ಎನ್ನುವುದನ್ನು ಒಪ್ಪಿಕೊಂಡರು. ಬೆಲೆಗಳು ಇಳಿದಾಗ ಪ್ರೈಸ್ ಸಪೋರ್ಟ್ ಕೊಡಬೇಕು ಎನ್ನುವ ವಿಷಯದಲ್ಲಿ ಅಷ್ಟೇ ತ್ವರಿತವಾಗಿ ಕೆಲಸ ಮಾಡುವುದಕ್ಕೆ ಆಗಲಿಲ್ಲವೇ ? ಸಿಂಗಪೂರ್, ಮಲೇಸಿಯಾ, ಈಸ್ಟ್ ಆಫ್ರಿಕಾ ರಾಷ್ಟ್ರಗಳಿಗೆ ನರಬರಾಜು ಮಾಡಲು ಬೆಲ್ಲದ ರಫ್ತು ಆಗುತ್ತಿತ್ತು. ಈಗಲೂ ಅದಕ್ಕೆ ಅವಕಾಶ ಮಾಡಿಕೊಡಲಾಗುತ್ತದೆಯೇ ?

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ರಫ್ತು ಮಾಡುವಂಥದ್ದು ಕೇಂದ್ರ ಸರ್ಕಾರದ ಜವಾಬ್ದಾರಿಯಾಗಿದೆ. ಕೇಂದ್ರ ಸರ್ಕಾರಕ್ಕೆ ಈ ರಾಜ್ಯದಲ್ಲಿರುವ ಬೆಲ್ಲದ ಬೆಲೆಯ ಪರಿಸ್ಥಿತಿಯನ್ನು ತಿಳಿಸಿದ್ದೇವೆ.

EXPORT OF DRY FISH FROM NORTH AND SOUTH KANARA DISTRICTS.

101. Sri D. S. NADKARNI (Ankola).—

Will the Minister of State for Fisheries and Ports be pleased to state :—

(*a*) the places from which dry fish is exported from the State ;

(*b*) the quantity of dry fish exported every year from North and South Kanara districts and the names of places of the above districts exporting the same ;

(*c*) the categories of dry fish that will be exported ?

Sri H. C. LINGA REDDY (Minister of State for Fisheries and Ports).—

(*a*) Mangalore and Malpe.